Date : 28-10-2015

# ಅಕ್ಕಿ ಉತ್ಪಾದನೆ ಹೆಚ್ಚಳಕ್ಕೆ ಸಬ್ಸಿಡಿ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ವಯ (RKVY) ಅಕ್ಕಿ ಉತ್ಪಾದನೆ ಹೆಚ್ಚಳಗೊಳಿಸಲು ಕೇರಳದಲ್ಲಿ 2015–16ನೇ ಸಾಲಿಗೆ ರೂ 81 ಕೋಟಿ ಸಬ್ಸಿಡಿ ಮಂಜೂರಾಗಿದೆಯೆನ್ನಲಾಗಿದೆ.

ಅಕ್ಕಿ ಉತ್ಪಾದನೆ ಪ್ರಗತಿಗೊಳಿಸಲು 2015–16ನೇ ಸಾಲಿನಲ್ಲಿ ಹೆಕ್ಟೇರ್‌ಗೆ ರೂ 15000/– ಸಬ್ಸಿಡಿ ಹಾಗೂ ಹೆಚ್ಚುವರಿಯಾಗಿ ಹೆಕ್ಟೇರ್‌ಗೆ ರೂ 45000 ಸಬ್ಸಿಡಿ ನೀಡಲಾಗುವುದೆಂದು ಕೃಷಿ ಇಲಾಖೆಯ ಪ್ರಕಟನೆ ತಿಳಿಸಿದೆಯೆನ್ನಲಾಗಿದೆ. ಒಟ್ಟು 180000 ಹೆಕ್ಟೇರ್ ಪ್ರದೇಶಕ್ಕೆ RKVY ಯನ್ವಯ ಸಬ್ಸಿಡಿ ದೊರಕಲಿದೆಯೆನ್ನಲಾಗಿದೆ. ಯೋಜನೆಯನ್ನೊಳಗೊಂಡ ಜಿಲ್ಲೆಗಳು–ಪಾಲಕ್ಕಾಡ್ (72000 ಹೆಕ್ಟೇರ್) ಆಲಪ್ಪುಜ (36000 ಹೆಕ್ಟೇರ್) ಕೋಟ್ಟಯಂ (16000 ಹೆಕ್ಟೇರ್) ತ್ರಿಶೂರ್ (19000 ಹೆಕ್ಟೇರ್).